ಬಿಡಾನಾ" ಎಂದು ಆಗ ಸಿಟ್ಟಾಗಿದ್ದೂ ಇತ್ತು. ಇದನರಿತ ಗಂಗವ್ವ, "ಅಯ್ಯೋ ಕುಟ್ರಿ ವಂಸ ಮುಂದ್ವರೀ ಬೇಕಲ್ಲೋ ಸವತಿ ಮಗ್ನೇ" ಎಂದು ತಕರಾರು ತೆಗೆದು ಕಣ್ಣೀರ ಚೆಲ್ಲಿ ರಂಪಾಟ ಮಾಡಿದ್ದಳು.

ಇಲ್ಲೀತನಕ ಇಪ್ಪತ್ತೆರಡು ಕನ್ಯಾ ನೋಡಿಯಾಗಿತ್ತು. ಬ್ರೋಕರ್ ಸುತ್ತಾಡಿ, ತೋರಿಸಿ, ಸುಸ್ತಾಗಿ ಹಟಕ್ಕೆ ಬಿದ್ದಿದ್ದ. "ಗಂಗವ್ವ ನನ್ ಕೈಚೀಲದಲ್ಲಿರೋ ಸ್ಟಾಕೆಲ್ಲಾ ಖಾಲಿ ಆಗೋಯ್ತು. ನಿನ್ ಮಗಾ ಒಪ್ಪೋದ ಕಾಣೆ. ರಾಣೆಬೆನ್ನೂರಾಗೆ ಒಂದು ಮಗಾ ಐತೆ. ಅದೇ ಕೊನೇ. ಒಪ್ಪಿದ್ದೇ ಆತಂದ್ರೆ ದಿಟ. ಇಲ್ಲಾ ನನ್ ಪಾಡಿಗೆ ನನ್ ಬಿಡ್ಬಿಡಿ" ಎಂದು ಬ್ರೋಕರ್ ಗವೀಶಯ್ಯ ಕಂಡೀಶನ್ನಾಗಿ ಹೇಳಿಬಿಟ್ಟ. "ಆತು ತೋರ್ಸೋ ಯಪ್ಪಾ. ಟರ್ಕೀ ಟವೆಲ್ಲು ವಜೀ ತಡಿಯೋವಷ್ಟು ರೊಕ್ಕ ಕೊಡಸು. ದೇವರಗುಡ್ಡದ ಸ್ವಾಮಿ ಮೇಲಾಣೆ. ನೀ ಕೇಳಿದ್ ಕಮೀಶನ್ ಕಿಸಿಯಾಗೆ ಇಡ್ತೀನಿ" ಎಂದು ಗಂಗವ್ವ ಮತ್ತೆ ಹಳೇ ಆಣೆ ಪ್ರಮಾಣ ಮಾಡಿದಳು. "ನೋಡೆ ಯವ್ವಾ. ಕಟ್ಟಿಸಿದ ಮನೆ, ಒಂದು ಸೈಟ್, ಬಂಗಾರ, ದುಡ್ಡು, ಇದರ ಮ್ಯಾಲೆ ಖರ್ಚೂ ಹಾಕಿ ಹರಿಹರದ ಚೌಲ್ಟ್ರೀಲಿ ಅದ್ದೂರಿ ಮದುವೆ ಮಾಡ್ಕೊತ್ತಾರೆ. ನೀನು ಹ್ಞೂ ಅಂದೇ ಬಿಡು" ಎಂದಾಗ ಗಂಗವ್ವ ಖುಷಿಯಿಂದ ತಲೆ ಆಡಿಸಿ, ಎಲಡಕೆ ಚೀಲವ ಗವೀಶಯ್ಯನ ಮುಂದೆ ಒಗೆದು, "ನಮ್ ಗಡವ ಏನಂತಾನ ನೋಡನೇಳು" ಎಂದು ಹೊರಡಲು ಅಣಿಯಾದಳು.

ಹೋಗಿ ನೋಡಿದಾಗ ಹಿರೇ ಹುಡುಗಿಯ ತಂದು ನಿಲ್ಲಿಸಿದ್ದರು. ಗುಡ್ಡಪ್ಪ ಕನ್ಯಾ ನೋಡಿ, "ಒಲ್ಲೇ ಕಣೋ ಯಪ್ಪಾ" ಎಂದು ಮುಖ ಕಿವಿಚಿಕೊಂಡನು. ಹುಡುಗಿಯ ತಂದೆ ಸಬ್ ರಿಜಿಸ್ಟ್ರಾರ್. "ಅದೇನು ಕೇಳ್ತಿಯೋ ಇನ್ನೂ ಕೇಳು. ಆಗಲ್ಲ ಅನ್ನೋ ಒಂದು ಮಾತು ಬಿಟ್ಟು" ಎಂದು ರೇಟು ಹೆಚ್ಚಿಸಿದನು. ರೊಕ್ಕದ ಮಾತಿಗೆ ಗಂಗವ್ವನ ಕಿವಿ ಚುರುಕಾದರೂ ಮಗನ ಬಾಳು ಬರಡಾದೀತೆಂದು ಮೌನವಾಗಿ ಬಿಟ್ಟಳು. "ಹುಡುಗನಿಗಿಂತ ನಾಲ್ಕು ವರ್ಷ ಕನ್ಯಾ ದೊಡ್ಡವಳು" ಎಂಬುದು ಚರ್ಚೆಯಾಯಿತು. ಆಗ ಮಧ್ಯಸ್ಥಿಗೆ ಕುಂತವರು "ಬಾಳಿ ಬದುಕೋಕೆ ಅದೆಲ್ಲಾ ಮುಖ್ಯವಲ್ಲ" ಎಂದು ಆ ಮಾತ ಬೀಸಿ ಹಿತ್ತಲಿಗೆ ಒಗೆದರು. ಹುಡುಗಿ ಕಪ್ಪು ಎಂಬ ಎರಡನೆಯ ವಿಷಯ ಬಂದಾಗ, "ಬಣ್ಣನೇನು ತೇದು ಕುಡೀತೀರಾ? ಬಾಳ್ವೆ ಮಾಡಕೆ ಗುಣ ಮುಖ್ಯ" ಎಂದು ಮಾತುಕತೆ ನೋಡಲು ಬಂದವರು ತಗಾದೆ ಎತ್ತಿದರು.

ಗುಡ್ಡಪ್ಪನಿಗೆ ಎಲ್ಲರೂ ನನ್ನ ವಿರುದ್ಧ ಪಿತೂರಿ ಮಾಡುತ್ತಿದ್ದಾರೆ ಅಂತನ್ನಿಸಿತು. ಗಟ್ಟಿ ದನಿಯಲ್ಲಿ ಹೇಳುತ್ತಿದ್ದ ಅನೇಕರು ಸಬ್ ರಿಜಿಸ್ಟ್ರಾರ್ ಸಾಹೇಬನ ಪರವಾಗಿ ವಾದ ಕುಕ್ಕಲು ತರಬೇತಾಗಿದ್ದರು. ಹೇಗಾದರೂ ಮಾಡಿ ಈ ಕನ್ಯೆಯ ಈ ಹುಡುಗನಿಗೆ ದಾಟಿಸಲೇಬೇಕೆಂದು ಹಟಕ್ಕೆ ಬಿದ್ದಿದ್ದರು. ಎಲ್ಲಾ ಪ್ರಶ್ನೆಗಳಿಗೂ ಉತ್ತರ ರೆಡಿಮಾಡಿಕೊಂಡೇ ಕೂತಿದ್ದರು. ಹುಶಾರಿ ಗುಡ್ಡಪ್ಪ ತಕ್ಷಣ ಎಚ್ಚರವಾಗಿ ಹೊಸ ವರಸೆ ತೆಗೆದಿಟ್ಟ. ಪಕ್ಕಾ ಮಾಹಿತಿ ಸಂಗ್ರಹಿಸಿಕೊಂಡೇ ಬಂದಿದ್ದ ಈತನೂ ಖಿಲಾಡಿ. "ಈಕೆ ತಂಗಿ ಚಲೋ ಅದಾಳಂತೆ. ಆಕೀನ ಬಚ್ಚಿಟ್ಟು ಹಿರಿಯಾಕಿ ತೋರ್ಸಿದ್ರೆ ಏನ್ ಪ್ರಯೋಜನ ಹೇಳ್ರಿ. ಕಿರೀ ಹುಡುಗೀನ ಕರೆಸಿದ್ರೆ ಏನಾದ್ರೂ ಮಾತಾಡಬಹುದು" ಎಂದು ಸಣ್ಣಗೆ ಗುನುಗಿದ.

ಈ ಮಾತು ಮೌ ಮುರಿದು ಎಲ್ಲರಿಗೂ ಕೇಳಿಸಿ ಕರೆಂಟು ತಂತಿ ತಾಗಿದಷ್ಟು ಕೆಲವರು ಉರಿಯಾದರು. ಹುಡುಗಿಯ ಅಪ್ಪ ಅಧಿಕಾರಿ ದನಿಯಲ್ಲಿ, "ಲೇ ಹುಡುಗ ನಿನ್ ಸುಮ್ನೆ ಬಿಟ್ರೆ ಮಗಳು ಬ್ಯಾಡ, ಚಲೋ ಇರೋ ಅತ್ತೇನೇ ನಂಗಿರ್ಲಿ ಅನ್ನೋ ಗಿರಾಕಿ ನೀನು. ದೊಡ್ಡಾಕಿನ ಇಟ್ಕೊಂಡು ಕಿರಿ ಹುಡುಗೀನ ಯಾವ ತಿರುಬೋಕಿ ನನ್ಮಗ ತೋರಿಸ್ತಾನೆ ಅದಾನ ಹೇಳು.